18. ಸೂಪರಿಂಟೆಂಡಿಂಗು ಇಂಜನಿಯರಿಂದ ತಲ್ಪಿದ 1906ನೆ ನವಂಬರ್ 20ನೆ ಮಕ್ರುಂ 6581ನೆ ನಂಬರ್ ಲೆಟರಿನಲ್ಲಿ ಹೊಸಕೋಟೆ ಕೋಟೆ ಕಂದಕದ ಮೇಲೆ ಸೂಲಿಬೆಲೆ ರೋಡಿನಲ್ಲಿ 6, 14 ರೂಪಾಯಿ ಮುಟ್ಟಿಸಿ ಒಂದು ಕಬ್ಬಿಣದ ಸೇತುವೆ ಕಟ್ಟುವದು ಹಾಲಿ ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣವಿಲ್ಲವಾಗಿ ಅವಶ್ಯಕತೆ ಕಾಣುವದಿಲ್ಲವೆಂದು ಈ ಪ್ರಾಜೆಕ್ಟನ್ನು ಬಿಟ್ಟುಬಿಡುವ ವಿಚಾರದಲ್ಲಿ ಅಭಿಪ್ರಾಯ ತಿಳಿಸಬೇಕೆಂದೂ ಸದರಿ ಲೆಟರಿನ 2ನೆ ಪ್ಯಾರಾದಲ್ಲಿ ನಮ್ಮೂರಿಸಿರುವ ಮೇರೆ ಎರಡರ ಪ್ರಾಜೆಕ್ಟುಗಳ ಪೈಕಿ ಒಂದು ವಿಧವಾಗಿ ಮಾಡಲು ಅಭಿಪ್ರಾಯ ಪಡುವ ಪಕ್ಷ ಅರೀತಿ ಮಾಡಿಸಲು ಆರ್ಡರ್ ಮಾಡುವದಾಗಿ ಬರಿಸಿದ್ದು ಓದ ಲಾಯಿತು.

ಮೊಬಲಗು ಇತರ ಬಾಬುಗಳಿಗೆ ಅತಿ ಜರೂರಾಗಿ ಬೇಕಾಗಿರುತ್ತೆಯಾಗಿ ಭಾರಿ ಲಾಗೆವಡು ಇಟ್ಟು ಈ ಸೇತುವೆ ಕಟ್ಟುವ ದು ಸದ್ಯಕ್ಕೆ ನಿಲ್ಲಿಸಿಬಿಡಬಹುದೆಂತಲೂ ಬೇಸಿಗೆ ಕಾಲದಲ್ಲಿ ತಿರುಗಾಡುವದಕ್ಕೆ ಅನುಕೂಲವಾಗಿ ಒಂದು ಅಣೆ ಕಟ್ಟಬಹುದೆಂತಲೂ ತೀರ್ಮಾನಿಸಲಾಯಿತು.

ಮುಂದಿನ ಮೀಟಿಂಗು 1907ನೆ ಇಸವಿ ಫೆಬ್ರವರಿ 15ಕ್ಕೆ ನಡಿಯಬೇಕೆಂದು ತೀರ್ಮಾನಿಸಲಾಯಿತು.

ಹೆಚ್. ಹೆಚ್. ಸ್ಪಾರ್ಕ್ಸ್,
ಪ್ರಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮಾ. ತಾರೀಖು 25ನೆ ಜನವರಿ 1907.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿ ಹೆಬ್ಬಾಳು ಹೋಬಳಿಗೆ ಸೇರಿದ ಸರ್ವಮಾನ್ಯ ಬೊಮ್ಮನಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೃಷ್ಣರಾಜಪೇಟೆ ತಾಲ್ಲೂಕು ಕಛೇರಿಯಲ್ಲಿ 1907ನೆ ಮಾರ್ಚಿ ಮಾಹೆ 9ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 7ನೆ ಮಕ್ರುಂ 6ನೆ ನಂಬರ್ ಮೈಸೂರ ಗೆಜೆಟ್ಟಿನ IIನೆ ಭಾಗದ 42-43ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್ನಾಮಾ, ತಾರೀಖು 25ನೆ ಜನವರಿ 1907.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು ಹೋಬಳಿಗೆ ಸೇರಿದ ಸರ್ವಮಾನ್ಯ ಲಕ್ಷ್ಮಿಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೃಷ್ಣರಾಜಪೇಟೆ ತಾಲ್ಲೂಕು ಕಛೇರಿಯಲ್ಲಿ 1907ನೆ ಮಾರ್ಚಿ 9ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 7ನೆ ಮಕ್ರುಂ 6ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 41-42ನೆ ನಂಬರ್ ಪೇಜು ನೋಡತಕ್ಕದ್ದು.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 25ನೆ ಜನವರಿ 1907ನೆ ಇಸವಿ.

ಅಲೂರು ಸಬ್ ತಾಲ್ಲೂಕು ಕುಂದೂರು ಹೋಬಳಿ ಜೋಡಿ ಸಮಸ್ತರಿಗೆ ಗ್ರಾಮವು ಜೋಡೀದಾರರು ನಾರಣಾಚಾರ್ರು ವ ಗೈರೇರಿಂದ ಬರತಕ್ಕ ಜೋಡಿ ಬಾಕಿಗೋಸ್ಕರವಾಗಿ 1907ನೆ ಇಸವಿ ಮಾರ್ಚಿ ಮಾಹೆ 18ನೆ ತಾರೀಖು ಸೋಮವಾರ ದಿವಿ 11 ಘಂಟೆ ಲಾಗಾಯಿತು ಕುಂದೂರು ವೊಕ್ಕಾಂನಲ್ಲಿ, ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪ ಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಜನವರಿ 31ನೆ ಮಕ್ರುಂ ಮೈಸೂರು ಗೆಜೆಟ್ಟಿನ IIನೆ ಭಾಗದ 30—31ನೆ ಪು ಟಗಳನ್ನು ನೋಡತಕ್ಕದ್ದು.

ಎಂ. ಎ. ನಾರಾಯಣಯ್ಯೆಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ತಾರೀಖು 8ನೆ ಫೆಬ್ರವರಿ-1907.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದ್ದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದ್ದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ಆ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಪುರು ವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.